ಕವಿತೆ



ಲಲಿತಾ ಸಿದ್ಧಬಸವಯ್ಯ
ಕಲೆ: ಮುರಳೀಧರ್ ರಾಥೋಡ್

# ರಖಾವು

ದಿನವೂ ಎರಡು ಸಲ ಹಲ್ಲುಜ್ಜು
ಅಲ್ಲಿ ಮನುಷ್ಯರು ಬೆವರುವುದಿಲ್ಲವಂತೆ
ಹಾಗೆಂದು ಸ್ನಾನ ಮಾಡದಿರಬೇಡ; ದೇಹ
ಹಗುರಾದರೆ ಮನಸ್ಸೂ ಹಗುರ ತಿಳಿ;
ಕಣ್ಣು ಮೂಗು ಕೈ ಕಾಲಿನ ಉಗುರು ಶುದ್ಧ
ಮಾಡಿಟ್ಟುಕೋ; ಆತ್ಮ ಶುದ್ಧವಾಗಿದ್ದರೆ ಸಾಕು
ಎನ್ನುವ ಗಿಣಿಮಾತಿನ ಭಾಷಣ ಹೊಡೆಯಬೇಡ;
ಆತ್ಮವನು ಕಾಣುವುದಕೂ ಮೊದಲು
ಕಾಣುವುದು ಅದರೊಡೆಯರ ಅಂಗ;

ಸಾಕು ಬಿಡಮ್ಮ ಎಷ್ಟು ಹೇಳುತ್ತೀಯ
ವೆಂದು ಮುಖ ಸಿಂಡರಿಸಬೇಡ; ಇದನೆ
ಮುಖಕೆ ಹೊಡೆದಂತೆ ಕಂಡವರು ಅಂದಾಗ
ನನ್ನ ನೆನೆಯುತ್ತೀಯ; ನೀನು ಹೋಗುವ ದೇಶ
ಥಂಡಿಮುಕ್ಕ; ಬೆಚ್ಚನೆಯದೇನಾದರು ಕುಡಿವುದಲ್ಲಿ
ನಿಚ್ಚದ ರೂಢಿಯಂತೆ; ಕುಡಿ, ಮುಳುಗಬೇಡ;
ಧೈರ್ಯ ಹಣ ಮತ್ತು ಒಳ್ಳೆಯ ಆರೋಗ್ಯವೆ
ಗೆಳೆಯರೆನುವರು ಪರದೇಶದಲ್ಲಿ

ನಿನ್ನಪ್ಪ ಸತ್ತುದಕೆ ಬಂದಂಥ ಮೊತ್ತ
ಅವರು ಕೊಡಿಸಿದ್ದ ವಸ್ತು ಒಡವೆಗಳ ಮಾರಿದ
ನಗದು; ನಿನ್ನ ತಾತನ ಸ್ಥಿರಾಸ್ತಿ ವಿಲೆಯಾದ ಬಾಬ್ತು
ನನ್ನ ತವರಿನ ಬಳುವಳಿಯ ಗಂಟು;
ಈ ಎಲ್ಲವನು ತುಂಬಿರುವೆ ನಿನ್ನ ಖಾತೆಗೆ;
ದಮ್ಮಡಿಯನೂ ಕದಲಿಸದೆ ಇಟ್ಟಿದ್ದೆ ನಿನಗಾಗಿಯೆ;
ನನ್ನ ಹೊಸ ಸಂಬಂಧದ ದೆಸೆಯ ತೂತುಕಾಸೂ
ಅದರೊಳಿಲ್ಲ; ನೀನು ಸಂಕೋಚಪಡುವ ಕಾರಣವೆ
ಇಲ್ಲ; ಓದು ಮುಗಿದು ಮೊದಲ ಸಂಬಳ ಕೈಗೆ
ಬೀಳುವನಕ ಹಂಚಿಕೆಯಲಿ ವೆಚ್ಚ ಮಾಡು;
ನಿನ್ನದೆ ಕುಯ್ಯೂ ಕುಡುಗೋಲೂ;

ನೀನು ಆ ದೇಶ ಬಿಟ್ಟು ಬರುವುದಿಲ್ಲೆಂದು ಗೊತ್ತು
ಬಂದರೂ ಈ ಮನೆಗೆ ಸುದ್ದಿಯನೂ ಬಿಡೆ ಗೊತ್ತು;
ಇದೇ ಇರಬಹುದು ಕೊನೆಯ ಸಲ ನಿನ್ನ ಮೊಗ
ನೋಡುವುದು; ನಿಮ್ಮಮ್ಮ ಅಳುವುದಿಲ್ಲ
ಅತ್ತು ವಿಶೇಷ ರಂಪಗಳ ಮಾಡುವುದು ನಿನ್ನ
ಅಪ್ಪನ ಸಾವಿನಲೆ ಮುಗಿದು ಕಣ್ಣಲ್ಲಿ ತೇವವಿಲ್ಲ;
ನಿಮ್ಮಮ್ಮ ಯಾವನೋ ಪುಂಡನ ರಖಾವು
ಎಂಬ ನಿತ್ಯ ಚುಚ್ಚುವ ಸೂಜಿಯ ತಪ್ಪಿಸಿಕೊಳ

